# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1480 |
| 2 | ಸದಸ್ಯರ ಹೆಸರು | : | ಶ್ರೀ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 24.09.2021 |
| 4 | ಉತ್ತರಿಸುವ ಸಚಿವರು | : | ಮಾನ್ಯ ಯೋಜನಾ ಸಚಿವರು, |

***

| ಪ್ರಶ್ನೆ | | ಉತ್ತರ |
|---|---|---|
| (ಅ) | ರಾಜ್ಯದಲ್ಲಿ 2016-17 ರಿಂದ 2020-2021ರ ವರೆಗೆ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಪ್ರತಿ ವರ್ಷಕ್ಕೆ ನಿಗಧಿಯಾಗಿರುವ ರೂ.2.00 ಕೋಟಿಗಳ ಅನುದಾನವನ್ನು ಎಲ್ಲಾ ಮಾನ್ಯ ಶಾಸಕರುಗಳು ಸೂಚಿಸಿರುವ ಕಾಮಗಾರಿಗಳಿಗೆ ಒದಗಿಸಲಾಗಿದೆಯೇ; (ಪ್ರತಿ ವರ್ಷದ ವಿವರಗಳನ್ನು ಪ್ರತ್ಯೇಕವಾಗಿ ನೀಡುವುದು) | ಹೌದು ಒದಗಿಸಲಾಗಿದೆ.<br><br>ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಮಾನ್ಯ ಶಾಸಕರು ಪ್ರಸ್ತಾಪಿಸುವ ಕಾಮಗಾರಿ/ಕ್ರಿಯಾ ಯೋಜನೆಗೆ ಜಿಲ್ಲಾಧಿಕಾರಿ ಮತ್ತು ಉಪವಿಭಾಗಾಧಿಕಾರಿಗಳ ಹಂತದಲ್ಲಿ ಅನುಮೋದನೆ ನೀಡಲಾಗುತ್ತಿದೆ.<br><br>2016-17ನೇ ಸಾಲಿನಿಂದ 2020-2021ನೇ ಸಾಲಿನವರೆಗೆ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ವರ್ಷವಾರು ಬಿಡುಗಡೆಯಾಗಿರುವ ಅನುದಾನದ ವಿವರಗಳು ಕೆಳಕಂಡಂತಿದೆ:-<br><br>1. 2016-17, 2017-18ನೇ ಸಾಲುಗಳಲ್ಲಿ ನಾಲ್ಕು ಕಂತುಗಳಲ್ಲಿ ಪೂರ್ಣವಾಗಿ ಬಿಡುಗಡೆಗೊಳಿಸಲಾಗಿದೆ.<br><br>2. 2018-19ನೇ ಸಾಲಿನಲ್ಲಿ ನಾಲ್ಕನೇ ಕಂತಿನ ಅನುದಾನದಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ. ಈ ಸಾಲಿನಲ್ಲಿ ಬಂಡವಾಳ ವೆಚ್ಚದಡಿ ರೂ.127.69 ಕೋಟಿಗಳು ಬಿಡುಗಡೆಗೆ ಬಾಕಿಯಿದ್ದು, ಸದರಿ ಅನುದಾನವನ್ನು ಬಿಡುಗಡೆ ಮಾಡುವ ಸಂಬಂಧ ಆರ್ಥಿಕ ಇಲಾಖೆಯನ್ನು ಕೋರಲಾಗಿದ್ದು, ಆರ್ಥಿಕ ಇಲಾಖೆಯು ದಿನಾಂಕ:09.08.2021ರಲ್ಲಿ ಪ್ರಸಕ್ತ ಸಾಲಿನಲ್ಲಿ ಲಭ್ಯವಿರುವ ಅನುದಾನ ಪೂರ್ಣವಾಗಿ ವೆಚ್ಚವಾದ ನಂತರ ಬಿಡುಗಡೆಗೊಳಿಸಲಾಗುವುದೆಂದು ಹಿಂಬರಹ ನೀಡಿರುತ್ತದೆ. ಆದ್ದರಿಂದ, ಲಭ್ಯವಿರುವ ಅನುದಾನ ವೆಚ್ಚವಾದ ನಂತರ ಸದರಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ.<br><br>3. 2019-20ನೇ ಸಾಲಿನಲ್ಲಿ ಎರಡು ಕಂತುಗಳು ಬಿಡುಗಡೆಯಾಗಿದ್ದು, ಬಾಕಿ ಇದ್ದ ರೂ.300.00 ಕೋಟಿ ಅನುದಾನವನ್ನು, 2020-21ನೇ ಸಾಲಿನಲ್ಲಿ ಎಲ್ಲಾ ಕ್ಷೇತ್ರಗಳಿಗೆ ಬಿಡುಗಡೆ ಮಾಡಲಾಗಿರುವ ಅನುದಾನದಲ್ಲಿ ರೂ.300.00 ಕೋಟಿಗಳನ್ನು 2019-20ನೇ ಸಾಲಿಗೆ ವರ್ಗಾಯಿಸಿಕೊಂಡು ವೆಚ್ಚ ಮಾಡಲು ಆರ್ಥಿಕ ಇಲಾಖೆಯು ಸಹಮತಿ ನೀಡಿದ್ದು, ಈ ಸಂಬಂಧ ದಿನಾಂಕ:13.08.2021 ರಂದು ಸುತ್ತೋಲೆ ಹೊರಡಿಸಿ, ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.<br><br>4. 2021-22ನೇ ಸಾಲಿನಲ್ಲಿ ರೂ.2.00 ಕೋಟಿಗಳಿಗೆ ಕ್ರಿಯಾ ಯೋಜನೆಯನ್ನು ರೂಪಿಸಲು ದಿನಾಂಕ:13.08.2021 ರಂದು ಸುತ್ತೋಲೆಯಲ್ಲಿ ತಿಳಿಸಲಾಗಿದ್ದು, ಆಗಸ್ಟ್-2021ರ ಅಂತ್ಯದವರೆಗೆ ಪ್ರತಿ ಕ್ಷೇತ್ರಕ್ಕೆ ರೂ.1.00 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. |

| ಪ್ರಶ್ನೆ | | ಉತ್ತರ |
|---|---|---|
| (ಆ) | ಒದಗಿಸಿದ್ದಲ್ಲಿ, ಯಾವ ವರ್ಷದಲ್ಲಿ ಎಷ್ಟು ಅನುದಾನವನ್ನು ಕಡಿತಗೊಳಿಸಲು ಆದೇಶಿಸಲಾಗಿದೆ; (ವರ್ಷವಾರು ಅನುದಾನ ಕಡಿತ ಮಾಡಿರುವ ಆದೇಶಗಳ ಪ್ರತಿ ಒದಗಿಸುವುದು) | ಆರ್ಥಿಕ ಇಲಾಖೆಯ ಹಿಂಬರಹ ದಿನಾಂಕ:29.04.2021ರ ಪ್ರಕಾರ 2020-21ನೇ ಸಾಲಿನಲ್ಲಿ ಕೋವಿಡ್ ಸಂಬಂಧ ಎಲ್ಲಾ ಕ್ಷೇತ್ರಗಳಿಗೆ ರೂ.1.00 ಕೋಟಿಗಳ ಅನುದಾನವನ್ನು ಮಾತ್ರ ಒದಗಿಸಲಾಗಿದೆ. |
| (ಇ) | 2021-22ನೇ ಸಾಲಿಗೆ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಪ್ರತಿಯೊಬ್ಬ ಮಾನ್ಯ ಶಾಸಕರು ಸೂಚಿಸುವ ಎಷ್ಟು ಮೊತ್ತದ ಕಾಮಗಾರಿಗಳಿಗೆ ಅನುದಾನದ ಒದಗಿಸಲಾಗುತ್ತದೆ? | 2021-22ನೇ ಸಾಲಿನಲ್ಲಿ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ರೂ.2.00 ಕೋಟಿಗಳ ಕಾಮಗಾರಿಗಳಿಗೆ ಅನುದಾನ ಒದಗಿಸಲಾಗುತ್ತದೆ. ಈ ಬಗ್ಗೆ ದಿನಾಂಕ:13.08.2021 ರ ಸುತ್ತೋಲೆಯಲ್ಲಿ ತಿಳಿಸಲಾಗಿದೆ. |

**ಸಂಖ್ಯೆ**: ಪಿಡಿಎಸ್ 94 ಕೆಎಲ್ಎಸ್ 2021

(ಮುನಿರತ್ನ)
ಸಚಿವರು,
ಯೋಜನೆ,ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

# ಕರ್ನಾಟಕ ಸರ್ಕಾರ

ಸಂಖ್ಯೆ:ಪಿಡಿಎಸ್/82/ ಕೆಎಲ್ಎಸ್/2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:13.08.2021

## ಸುತ್ತೋಲೆ

ದಿನಾಂಕ:03.08.2021ರಂದು ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್- ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ (KLLADS) ಪೂರ್ಣ ಅನುದಾನ ಬಿಡುಗಡೆ ಮಾಡುವುದು ಹಾಗೂ 2021-22ನೇ ಸಾಲಿಗೆ ರೂ.1.00 ಕೋಟಿ ಬದಲು ರೂ.2.00 ಕೋಟಿಗಳ ಅನುದಾನವನ್ನು ಮಂಜೂರು ಮಾಡುವ ಬಗ್ಗೆ ಮತ್ತು ನಿಗದಿತ ಅವಧಿಯಲ್ಲಿ ಕಾಮಗಾರಿಗಳನ್ನೊಳಗೊಂಡ ಕ್ರಿಯಾ ಯೋಜನೆ ರೂಪಿಸಿ, ಅನುಷ್ಠಾನಗೊಳಿಸುವುದು ಹಾಗೂ ಎರಡು ವರ್ಷಕ್ಕಿಂತ ಅವಧಿ ಮೀರಿದ ಕಾಮಗಾರಿಗಳ ಅನುದಾನವನ್ನು ಸರ್ಕಾರಕ್ಕೆ ಎಂಪಿಲ್ಯಾಡ್ಸ್ ಮಾದರಿಯಲ್ಲಿ ಅಧ್ಯರ್ಪಣೆ ಮಾಡುವ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಯಿತು ಹಾಗೂ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ನಿರ್ಧರಿಸಲಾಯಿತು ಈ ಕುರಿತು ಆರ್ಥಿಕ ಇಲಾಖೆಯು ದಿನಾಂಕ:09.08.2021ರಂದು ಹಿಂಬರಹ ನೀಡಿದ್ದು, ಸದರಿ ಹಿಂಬರಹದಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು /ಉಪ ವಿಭಾಗಾಧಿಕಾರಿಗಳು ಸೂಕ್ತ ಕ್ರಮವಹಿಸಲು ತಿಳಿಸಲಾಗಿದೆ.

1. 2021-22ನೇ ಸಾಲಿಗೆ ರೂ.2.00 ಕೋಟಿಗಳಿಗೆ ಕ್ರಿಯಾಯೋಜನೆ ತಯಾರಿಸಲು ಸಹಮತಿ ನೀಡಿದೆ. ಆದ್ದರಿಂದ ಕೂಡಲೇ ಎಲ್ಲಾ ಜಿಲ್ಲಾಧಿಕಾರಿಗಳು ರೂ.2.00ಕೋಟಿಗಳಿಗೆ ಕ್ರಿಯಾಯೋಜನೆ ರೂಪಿಸಿ ಅನುಮೋದನೆ ನೀಡುವುದು.
2. KLLADS ಮಾರ್ಗಸೂಚಿಗಳ ಕಂಡಿಕೆ 3.2 ರ ಅನುಸಾರ ಕ್ರಿಯಾ ಯೋಜನೆಯನ್ನು ಪ್ರತಿ ವರ್ಷ ಜೂನ್ ಅಂತ್ಯದೊಳಗೆ ಅಂತಿಮಗೊಳಿಸತಕ್ಕದ್ದು. ಕಾಮಗಾರಿಗಳ ಪ್ರಗತಿಗೆ ಅನುಗುಣವಾಗಿ ಸರ್ಕಾರದಿಂದ ಜಿಲ್ಲೆಗೆ ಒಟ್ಟಾರೆ ಬಿಡುಗಡೆಯಾಗಿರುವ/ಬಿಡುಗಡೆಯಾಗುವ **(ಶಾಸಕರುವಾರು ಬಿಡುಗಡೆಯಾಗುವುದಿಲ್ಲ)** ಅನುದಾನದಲ್ಲಿ ಭರಿಸತಕ್ಕದ್ದು.
3. ಇನ್ನೂ ಮುಂದೆ ಯೋಜನಾ ಇಲಾಖೆಯು ಅನುದಾನವನ್ನು ಕ್ಷೇತ್ರವಾರು ಬಿಡುಗಡೆ ಮಾಡುವ ಬದಲಾಗಿ ಜಿಲ್ಲಾವಾರು ಬಿಡುಗಡೆ ಮಾಡಲು ಕ್ರಮವಹಿಸುತ್ತದೆ. ಆದ್ದರಿಂದ ಜಿಲ್ಲಾಧಿಕಾರಿಗಳು/ಉಪವಿಭಾಗಾಧಿಕಾರಿ ಲಭ್ಯವಿರುವ ಅನುದಾನವನ್ನು ಪ್ರತಿ ಕ್ಷೇತ್ರಕ್ಕೆ ರೂ.2.00ಕೋಟಿಗಳ ಮಿತಿಯಲ್ಲಿ ಕಾಮಗಾರಿಗಳ ಪ್ರಗತಿ ಆಧರಿಸಿ ಹಣ ಪಾವತಿಸಲು ಸೂಕ್ತ ಕ್ರಮವಹಿಸುವುದು.
4. 2020-21ನೇ ಸಾಲಿನಲ್ಲಿ ಪ್ರತಿ ಕ್ಷೇತ್ರಕ್ಕೆ ರೂ.1.00ಕೋಟಿಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿತ್ತು. ಹೆಚ್ಚುವರಿಯಾಗಿ ಬಿಡುಗಡೆಯಾಗಿರುವ ಅನುದಾನ ಪ್ರತಿ ಕ್ಷೇತ್ರಕ್ಕೆ ರೂ.1.00ಕೋಟಿಯನ್ನು 2019-20ನೇ ಸಾಲಿಗೆ ವರ್ಗಾಯಿಸಿಕೊಂಡು ಕಾಮಗಾರಿಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸುವುದು.

5. 2018-19ನೇ ಸಾಲಿಗೆ ಸಂಬಂಧಿಸಿದಂತೆ ಪ್ರತಿ ಕ್ಷೇತ್ರಕ್ಕೆ ಬಿಡುಗಡೆಗೆ ಬಾಕಿ ಇರುವ (ರೂ.127.69 ಕೋಟಿಗಳನ್ನು) ನಾಲ್ಕನೇ ಕಂತಿನ ಬಂಡವಾಳ ವೆಚ್ಚದ ಅನುದಾನವನ್ನು ಬಿಡುಗಡೆಗೊಳಿಸಲು ಪ್ರಸ್ತುತ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಲಭ್ಯವಿರುವ ಅನುದಾನವನ್ನು ಪೂರ್ಣವಾಗಿ ವೆಚ್ಚ ಮಾಡಿದ ನಂತರ ಅನುದಾನ ಬಿಡುಗಡೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.
6. KLLADS ಮಾರ್ಗಸೂಚಿ ಪ್ಯಾರ 4.1 ರಂತೆ ಎರಡು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಪ್ರಾರಂಭವಾಗದೇ ಉಳಿದಿರುವ ಕಾಮಗಾರಿಯ ಅನುದಾನವನ್ನು ಕೂಡಲೇ ರಾಜ್ಯ ಮಟ್ಟದ ಕೇಂದ್ರೀಕೃತ ಬ್ಯಾಂಕ್ ಖಾತೆಗೆ ಜಮೆಗೊಳಿಸತಕ್ಕದ್ದು.

(ಡಾ.ಚಂದ್ರಶೇಖರಯ್ಯ)
ನಿರ್ದೇಶಕರು,
ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಪ್ರದೇಶಾಭಿವೃದ್ಧಿ, ಮಂಡಳಿ ವಿಭಾಗ,
ಯೋಜನೆ ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು.

**ಪ್ರತಿಯನ್ನು:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ವಿಧಾನ ಸಭೆ / ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ.
5. ಮಾನ್ಯ ಯೋಜನಾ ಸಚಿವರ ಪ್ರಧಾನ ಕಾರ್ಯದರ್ಶಿಯವರು.
6. ಮಾನ್ಯ ಸಚಿವರುಗಳ ಆಪ್ತ ಕಾರ್ಯದರ್ಶಿಗಳು.
7. ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳು.
8. ಎಲ್ಲಾ ಜಿಲ್ಲಾ ಪಂಚಾಯ್ತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನಾ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಯೋಜನಾ ಇಲಾಖೆ.
11. ಶಾಖಾಧಿಕಾರಿ, ಸ್ವೀಮರ ಶಾಖೆ, ಯೋಜನಾ ಇಲಾಖೆ (ಕಾರ್ಯಪಂಡಿತಯ್ಯನ ಗೋಷ್ಟಿ).
12. ಶಾಖಾ ರಕ್ಷಾ ಕಡತ / ಬಿಡಿ ಪ್ರತಿಗಳು / ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ವೆಬ್‌ಸೈಟ್‌ಗೆ.

ಆಇ 29 ವೆಚ್ಚ 6/2021 ಇ
PDS/KLS-82/2020

ಆರ್ಥಿಕ ಇಲಾಖೆ, ವೆಚ್ಚ 6
ದಿನಾಂಕ:29.4.2021

ಆಡಳಿತ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಬಾಕಿ ರೂ.538.94ಕೋಟಿ ಬಿಡುಗಡೆ ಪ್ರಸ್ತಾವನೆ ಸಂಬಂಧ ದಿನಾಂಕ:9.4.2021ರಂದು ನೀಡಿರುವ ಅಭಿಪ್ರಾಯವನ್ನೇ ಪುನರುಚ್ಚರಿಸಿದೆ.

ಮುಂದುವರೆದು ಹೊಳೆನರಸೀಪುರ ವಿಧಾನಸಭಾ ಕ್ಷೇತ್ರಕ್ಕೆ 2020-21ನೇ ಸಾಲಿನಲ್ಲಿ ರೂ.200.00ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸುವ ಸಂಬಂಧ 2020-21ನೇ ಸಾಲಿನಲ್ಲಿ ಕೋವಿಡ್ 19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಪ್ರತಿ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ರೂ.100.00ಲಕ್ಷಗಳಿಗೆ ಸೀಮಿತಗೊಳಿಸಲು ತಿಳಿಸಿದ್ದರೂ ಪುನ: ಸದರಿ ಅವಧಿ 2020-21ನೇ ಸಾಲಿಗೆ ರೂ.200.00ಲಕ್ಷಗಳಿಗೆ ಕ್ರಿಯಾ ಯೋಜನೆ ತಯಾರಿಸಲು ಪ್ರಸ್ತಾವಿಸಿರುವುದು ಸೂಕ್ತವಲ್ಲ.

2020-21ನೇ ಸಾಲಿನ ವ್ಯತ್ಯಾಸದ ರೂ.100.00ಲಕ್ಷಗಳ ಕಾಮಗಾರಿಗಳನ್ನು ಪ್ರಸಕ್ತ ಸಾಲಿನಲ್ಲಿ ಅಂದರೆ 2021-22ರಲ್ಲಿ ಲಭ್ಯ ಅನುದಾನದಲ್ಲಿ ಅಳವಡಿಸಿ ಕ್ರಿಯಾ ಯೋಜನೆಯನ್ನು ಸಹಮತಿಸಲು ತಯಾರಿಸಲು ಆಡಳಿತ ಇಲಾಖೆ ಕ್ರಮವಹಿಸುವಂತೆ ತಿಳಿಸಿದೆ.

(ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಆರ್ಥಿಕ ಇಲಾಖೆರವರಿಂದ ಅನುಮೋದಿತ)

(ಎಂ. ಮಂಜುನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿಪಂ)
ಆರ್ಥಿಕ ಇಲಾಖೆ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಯೋಜನಾ ಇಲಾಖೆ